1) ಪಠ್ಯ ಪುಸ್ತಕಗಳನ್ನು ಮುದ್ರಿಸಲಾಗಿದ್ದು, ಪ್ರತಿ ವರ್ಷವೂ ಒದಗಿಸಲಾಗುತ್ತಿದೆ.

2) ಪಠ್ಯ ಪುಸ್ತಕಗಳನ್ನು ಮುದ್ರಿಸಲಾಗಿದ್ದು ಪ್ರತಿ ವರ್ಷವೂ ಒದಗಿಸಲಾಗುತ್ತಿದೆ. ಆದರೂ ಸಹ ಕಡಿಮೆಯಾಗಿ ಒದಗಿಸಿರುವಿಕೆ ಹಾಗೂ ವಿಳಂಬದ ಬಗ್ಗೆ ಕೆಲವು ದೂರುಗಳು ಕಳೆದ ಎರಡು ಮೂರು ವರ್ಷಗಳಲ್ಲಿ ಬಂದಿವೆ. ಪಠ್ಯ ಪುಸ್ತಕಗಳ ಮುದ್ರಣ ಮತ್ತು ಹಂಚಿಕೆ ಕಾರ್ಯವನ್ನು ಪರಿಪೂರ್ಣವಾಗಿ ನಿರ್ವಹಿಸಲು ಒಂದು ಸ್ವಾಯತ್ತತೆ ಹೊಂದಿದ ಸಹಕಾರಿ ಸಂಘವನ್ನು ಸ್ಥಾಪಿಸಲು ನಿರ್ಧಾರವನ್ನು ಕೈಗೊಳ್ಳುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. ಇದಾದರೆ ಇನ್ನು ಮುಂದೆ ಈ ನ್ಯೂನತೆಯು ಸರಿಹೋಗುತ್ತದೆ.

ಡೀಸೆಲ್ ಅಭಾವದಿಂದ ಓಡಿಸದಿರುವ ವಾಹನಗಳ ಸಂಖ್ಯೆ

1643 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡೀಸಲ್ ಅಭಾವದಿಂದ ಓಡಿಸದಿರುವ ರಸ್ತೆ ಸಾರಿಗೆ ಬಸ್‌ಗಳ ಸಂಖ್ಯೆ ಎಷ್ಟು?

ಆ) ಕೆಟ್ಟು ನಿಂತಿರುವ ಬಸ್‌ಗಳ ಸಂಖ್ಯೆ ಎಷ್ಟು?

ಇ) ಹಾಲಿ ಓಡಾಡುತ್ತಿರುವ ಬಸ್‌ಗಳ ಸಂಖ್ಯೆ ಎಷ್ಟು?

ಈ) ಹೊಸದಾಗಿ ಖರೀದಿ ಮಾಡಲಿರುವ ಬಸ್‌ಗಳ ಸಂಖ್ಯೆ ಎಷ್ಟು?

ಉ) ರಾಜ್ಯದಲ್ಲಿರುವ ಸಾರಿಗೆ ಡಿಪೋಗಳೆಷ್ಟು?

ಊ) ಚಾಮರಾಜನಗರಕ್ಕೆ ಒಂದು ಸಾರಿಗೆ ಡಿಪೋ ಅನ್ನು ಸರ್ಕಾರ ಕೊಡಲು ನಿರ್ಧರಿಸಿದೆಯೇ?

ಶ್ರೀ ಅಜೀಜ್ ಸೇಠ್, (ಸಾರಿಗೆ ಸಚಿವರು)

ಅ) 1227 ಅನುಸೂಚಿಗಳನ್ನು ಕಡಿತಗೊಳಿಸಲಾಗಿತ್ತು.

ಆ) 272 ವಾಹನಗಳಿದ್ದವು.

ಇ) ಸದ್ಯಕ್ಕೆ 7472 ಅನುಸೂಚಿಗಳನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಕಾರ್ಯಚರಣೆ ಮಾಡುತ್ತಿದೆ.

ಈ) 1990-91ನೇ ವರ್ಷಕ್ಕೆ ರೂಪಿಸಲಾದ ಕಾರ್ಯಯೋಜನೆಯ ಪ್ರಕಾರ ವಿವಿಧ ಮಾದರಿಯ 850 ಹೊಸ ವಾಹನಗಳನ್ನು ಸೇರ್ಪಡೆ ಮಾಡಲು ನಿರ್ಧರಿಸಲಾಗಿದೆ.

ಉ) 91 ಘಟಕಗಳಿವೆ

ಊ) ಸದ್ಯಕ್ಕೆ ಈ ಪ್ರಸ್ತಾವನೆ ಇರುವುದಿಲ್ಲ.

ಕರ್ನಾಟಕದಲ್ಲಿರುವ ತಾಂತ್ರಿಕ ಕಾಲೇಜುಗಳ ಸಂಖ್ಯೆ

1644 - ಶ್ರೀ ವಾಟಾಳ್ ನಾಗರಾಜು (ಚಾಮರಾಜನಗರ) ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿರುವ ತಾಂತ್ರಿಕ ಕಾಲೇಜುಗಳ ಸಂಖ್ಯೆ ಎಷ್ಟು?

ಆ) ಇವುಗಳನ್ನು ನಡೆಸುತ್ತಿರುವವರು ಯಾರು ಯಾರು?

ಇ) ಯಾವ ಉದ್ದೇಶಗಳ ಸಲುವಾಗಿ ಈ ಕಾಲೇಜುಗಳನ್ನು ಪಡೆದಿದ್ದಾರೆ?

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಸಚಿವರು):

ಅ) 51

ಆ) ಪಟ್ಟಿ ಲಗತ್ತಿಸಿದೆ.

ಇ) ಇಂಜಿನಿಯರಿಂಗ್ ವಿದ್ಯಾಭ್ಯಾಸ ನೀಡುವ ಉದ್ದೇಶದಿಂದ ಸ್ಥಾಪಿಸಲಾಗಿದೆ.